ಶ್ರೀ ಅಜೀಜ್ ಸೇಟ್ : ಸರಕ್ಕಾರ ನಡೆಸುವುದಕ್ಕೆ ಮೆಷೀನರಿ ಇಲ್ಲ. ಎಂ. ಎಸ್. ಆರ್. ಟಿ. ಸಿ. ಅಟಾನಮಸ್ ಬಾಡಿ ಅದು ಕಂಟ್ರಾಕ್ಟ್ ಕ್ಯಾರೆಜುಗಳನ್ನು ತೆಗದುಕೊಳ್ಳಲು ತೀರ್ಮಾನಿಸಿದ್ದೆ, ಬಹುಶಃ ಕಲ್ಲವು ದಿವಸಗಳಲ್ಲಿ ಈ ಕೆಲಸವಾಗಬಹುದು. ಒಂದು ವಿಷಯವನ್ನು ಗಮನಿಸಬೇಕು. ತಮಿಳುನಾಡಿನಲ್ಲಿ ಸರಕಾರ ಕಾಂಟ್ರಾಕ್ಟ್ ಕ್ಯಾರೇಜುಗಳನ್ನು ಮತ್ತು ಸ್ಟೇಟ್ ಕ್ಯಾರೇಜುಗಳನ್ನು ಲೆಜಿಸ್ಲೇಷನ್ ಮೂಲಕ ತೆಗದುಕೊಳ್ಳಲು ಕಾನೂನು ಮಾಡಿತು. ಆದರೆ ಆ ಕಾನೂನು ಹೈಕೊರ್ಟಿನಲ್ಲಿ ಸ್ಟ್ರಕ್‌ಡೌನ್ ಆಗಿದೆ.

ನಾವೂ ಕಾನೂನು ತರಬಹುದೇ ಎಂದು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ :—ನಾನು ಒಂದು ವಿಚಾರ ಅಧ್ಯಕ್ಷರ ಗಮನಕ್ಕೆ ತರಬೇಕಾಗಿದೆ.

ಅಧ್ಯಕ್ಷರು :—ತಾವು ಬೇರೆ ವಿಚಾರವಿದ್ದರೆ ಅದನ್ನು ಪ್ರಶ್ನೋತ್ತರ ಕಾಲವಾದ ಮೇಲೆ ಪ್ರಸ್ತಾಪ ಮಾಡಬಹುದು.

ಶ್ರೀ ಕಾಗೋಡು ತಿಮ್ಮಪ್ಪ :—ಸ್ಪೆಷಲ್ ಸ್ಕ್ವಾಡ್‌ನವರು ಪರೀಕ್ಷಾಗಿರುವುದರಿಂದ ಕಾಂಟ್ರಾಕ್ಟ್ ಕ್ಯಾರೇಜುಗಳನ್ನು ಇಷ್ಟು ಅವ್ಯವಸ್ಥೆಯಿಂದ ನಡೆಸುತ್ತಿದ್ದಾರೆಂಬುದು ಗಮನಕ್ಕೆ ಬಂದಿದೆಯೇ ?

ಶ್ರೀ ಅಜೀಜ್ ಸೇಟ್ :—ಇದುವರೆಗೆ ಹಿಡಿದು ಜುಲ್ಮಾನೆ ಹಾಕಿರುವ ವಿಚಾರವನ್ನು ನಾನು ಹೇಳಿದೆ.

LANDS GRANTED UNDER N. A. SCHEME

41 SRI S. KARIAPPA (Kanakapur).—

Will the Minister for Agriculture and Forests be pleased to state :—

(*a*) whether lands granted under N. A. scheme will be treated on a par with the revenue lands in respect of tenancy ;

(*b*) the action the Government intend to take against the persons who have snatched away the lands granted under the scheme ?

SRI K. H. PATIL (Minister for Agriculture and Forests).—

(*a*) Only the lessee can cultivate the lands granted under Non-Alienation Scheme, subject to renewal of the lease every year and on payment of the lease rent.

(*b*) If such instances come to light the leases will be terminated and the land resumed by the Forest Department.

ಶ್ರೀ ಎಸ್. ಕರಿಯಪ್ಪ :— ಎನ್. ಎ. ಸ್ಕೀಂ ಪ್ರಕಾರ ಅರಣ್ಯದ ಜಮೀನು ಕೊಟ್ಟಿರುವುದನ್ನು ಬೇರೆಯವರಿಗೆ ಮಾರಬಹುದೇ ?

ಶ್ರೀ ಕೆ. ಹೆಚ್. ಪಾಟೀಲ್.— ಅದನ್ನು ಗೇಣೀದಾರರಿಗೆ ಮಾತ್ರ ಕೊಡಲಾಗಿದೆ. ಅದನ್ನು ಯಾವರೀತಿಯಲ್ಲೂ ಎಲಿಯನೇಟ್ ಮಾಡುವುದಕ್ಕೆ ಬರುವುದಿಲ್ಲ ಯಾರಾದರೂ ಎಲಯನೇಟ್ ಪಗೈರೆ ಮಾಡಿರುವುದನ್ನು ಗಮನಕ್ಕೆ ತಂದರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಕರಿಯಪ್ಪ :—ಕೆಲವು ಕಡೆ ಎಲಿಯನೇಟ್ ಮಾಡಿದ್ದಾರೆ, ನುಮಾರು ಐದಾರು ಜನರು ಆ ರೀತಿ ಮಾಡಿದ್ದಾರೆ, ಬೇರೆಯವರು ಪಡೆದು ಐದಾರು ವರ್ಷದಿಂದ ಜಮೀನನ್ನು ಸಾಗು ಮಾಡುತ್ತಿದ್ದಾರೆ. ಇದಕ್ಕೇನು ಮಾಡುತ್ತೀರಿ ?

ಶ್ರೀ ಕೆ. ಹೆಚ್. ಪಾಟೀಲ್:—ಹಾಗೆ ಮಾಡಿದ್ದರೆ ಲೀಸ್ ರದ್ದುಮಾಡಿ ಸರಕಾರದ ವಶಕ್ಕೆ ಜಮೀನನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಕರಿಯಪ್ಪ :— ಇಲಾಖೆಯೇ ವಾಲಂಟರಿಯಾಗಿ ಇಂಥ ವಿಷಯುಗಳಲ್ಲಿ ಕ್ರಮ ಕೈಕೊಳ್ಳುವುದಕ್ಕಾಗುವುದಿಲ್ಲವೇ ?

ಶ್ರೀ ಕೆ. ಹೆಚ್. ಪಾಟೀಲ್:—ಇಲಾಖೆ ಹಾಗೆ ಮಾಡಬೇಕಾದ್ದು ಅದರ ಕರ್ತವ್ಯ. ಮಾನ್ಯ ಸದಸ್ಯರು ಅಂಥ ಸಂದರ್ಭಗಳಿದ್ದು ಇಲಾಖೆಯ ಗಮನಕ್ಕೆ ಬಾರದಿರುವುದಿದ್ದರೆ ಹೇಳಿದರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

LAND GRANTED IN KARUVINAHALLI KAVAL UNDER N. A. SCHEME

44 SRI S. KARIAPPA (Kanakapura).—

Will the Minister for Agriculture and Forests be pleased to state :

(*a*) the names of persons who have been granted